ಸುನೀಲ್‌ನ ಎಡತೋಳಿಗೆ ಕೈ ಹಾಕಿ ಎಳೆಯಲು ಪ್ರಯತ್ನಿಸಿದ. ಆಗ ಅವನು "ಅಮ್ಮಾ..." ಎಂದು ಜೋರಾಗಿ ಚೀರಿದ.

ತನ್ನ ಹೇಳಿಕೆ ಮುಗಿಸಿ ಅನುಮತಿ ಕೊಟ್ಟರೆ ಹೋಗುವೆ ಎಂಬಂತೆ ನಿಂತಿದ್ದ ಹಾಲಿನ ನಾಗೇಶ ''ಸಾರ್... ಇದೇ ಧ್ವನಿ... ಮೊದಲನೇ ಕೂಗು ಇದೇ ಥರ ಇತ್ತು..."

"ಸೋ ಮೊದಲಿನದು ಸುನೀಲ್... ಹಾಗಿದ್ದರೆ ಎರಡನೆ ಕೂಗು ವಿಶ್ವನಾಥ ರಾಯರದ್ದು... ರೈಟ್ ಸುನೀಲ್, ಇನ್ನೇನಾದ್ರೂ ಇದ್ರೆ ಈಗಲೇ ಹೇಳ್ತಿಯಾ ಅಥವಾ ಸ್ಟೇಶನ್‌ನಲ್ಲಿ ಒದೆ ಬಿದ್ದ ಮೇಲೆ ಹೇಳ್ತಿಯೋ..."

ನಾಗರಾಜಯ್ಯ ಅಪ್ಪಟ ಪೊಲೀಸ್ ಭಾಷೆಯಲ್ಲಿ ಮಾತಾಡತೊಡಗಿದ. ಸುನೀಲ್ ಬಾಯಿ ಬಿಡಲಿಲ್ಲ.

"ನನಗೆ ಗೊತ್ತು ಸುನೀಲ್, ಇದರಲ್ಲಿ ನೀನೊಬ್ಬನೇ ಅಲ್ಲ ಇನ್ನೂ ಒಬ್ಬರಾದರೂ ಇದ್ದಾರೆ. ಅದು ನಿಮ್ಮ ಅಮ್ಮ ಅಲ್ಲ. ನೀನು ಇಲ್ಲಿಯೇ ಹೇಳಬಹುದು ಅಥವಾ ಸುಮ್ಮನಿರಬಹುದು. ಆದರೆ, ನಮ್ಮ ಹತ್ತಿರ ಬೇಕಾದಷ್ಟು ಮೆಥೆಡ್‌ಗಳಿವೆ. ಸಿನಿಮಾ, ಟೀವಿ ಸೀರಿಯಲ್‌ಗಳಲ್ಲಿ ನೋಡಿರಬೇಕಲ್ಲವಾ? ಇಲ್ಲೇ ನಿಜ ಬಾಯ್ಬಿಟ್ಟರೆ ಸರಿ, ಇಲ್ಲದಿದ್ರೆ..."

ಅಲ್ಲಿದ್ದ ವಿಶ್ವನಾಥ ಅವರ ಬಂಧುಗಳು ದಂಗಾದರು. ಸುನೀಲ್ ಏನೂ ಆಗದವನಂತೆ ಬಾಯಿ ಬಿಡದೇ ನಿಂತಿದ್ದ.

ಕಾನ್‌ಸ್ಟೆಬಲ್‌ಗಳು ಶವವನ್ನು ಪೋಸ್ಟ್‌ಮಾರ್ಟಂಗೆ ಸಾಗಿಸಲು ವ್ಯವಸ್ಥೆ ಮಾಡತೊಡಗಿದರು. ಪೊಲೀಸರ ಮುಖದಲ್ಲಿ ಒಂದು ರೀತಿಯ ಸಂತೋಷ. ಹೆಣ ಸಾಗಿಸುವ ಮುಂಚೆಯೇ ಕೊಲೆಗಾರನನ್ನು ಕಂಡು ಹಿಡಿದುಬಿಟ್ಟೆವು ಎಂದು. ಒಂದು ರೀತಿಯ ಹೆಮ್ಮೆ. ಆದರೆ ಆ ಸಂತಸ ನಾಗರಾಜಯ್ಯನ ಮುಖದಲ್ಲಿ ಇರಲಿಲ್ಲ.

ಅವನಿಗೆ 'ಇಲ್ಲೇನೋ ಸರಿಯಿಲ್ಲ' ಎಂದೇ ಅನಿಸುತ್ತಿತ್ತು. ಈ ಇಬ್ಬರು ಅಮ್ಮ ಮಕ್ಕಳು ಈ ರೀತಿಯ ಪ್ಲಾನಿಂಗ್ ಮಾಡಿ ಸಾಯಿಸುವುದಕ್ಕೆ ಸಾಧ್ಯವಿಲ್ಲ. ಹಾಗಿದ್ದರೆ ಇವರೆಲ್ಲ ಇದ್ದಾಗಲೇ ಯಾಕೆ? ವಿಲ್ ಬರೆದಿದ್ದ ವಿಚಾರ ಇವರಿಗೆ ಹೇಗೆ ತಿಳಿಯಿತು ಅಥವಾ ಯಾರಿಗೂ ಹತ್ತಿರ ಬಿಟ್ಟುಕೊಳ್ಳದ ಈ ವಿಶ್ವನಾಥಯ್ಯ ಯಃಕಶ್ಚಿತ್ ಒಬ್ಬ ಕೆಲಸದಾಕೆಗೆ ಅದೂ ಎರಡು ಮೂರು ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದವಳಿಗೆ ಯಾಕೆ ಅರವತ್ತು ಕೋಟಿ ಆಸ್ತಿ ಬರೆಯುತ್ತಾನೆ? ರಜನಿ ಹೇಳಿದಂತೆ ಅವಳ ಮಾಜಿ ಪತಿ ಕಾಣೆ ಆಗಿದ್ದಾನೆ ಎಂದೇ? ಅದಕ್ಕೂ ಇದಕ್ಕೂ ಏನಾದರೂ ಸಂಬಂಧ ಇದೆಯೇ? ಸುನೀಲ್ ವಿಶ್ವನಾಥಯ್ಯ ಅವರ ದೂರದ ಮಗ ಆಗಿರದಿದ್ದರೆ ಇವರೆಲ್ಲ ಯಾಕೆ ತಮಗೂ ಅದಕ್ಕೂ ಸಂಬಂಧ ಇಲ್ಲ ಎಂಬಂತೆ ಕೇವಲ ಕಾಟಾಚಾರಕ್ಕೆ ಗೊತ್ತಿಲ್ಲ ಅನ್ನುತ್ತಿದ್ದಾರೆ? ಅವನ ತಲೆಯನ್ನು ಯೋಚನೆಗಳ ಹುಳಗಳು ಕೊರೆಯತೊಡಗಿದವು.

ನಾಗರಾಜಯ್ಯ ಒಂದು ಕ್ಷಣ ತನ್ನ ಬೋಳುತಲೆ ಸವರಿಕೊಂಡು ನಿಂತ. ಅವನಿಗೆ ಏನೋ ಸಮಾಧಾನ ಇಲ್ಲ. ಮೂವತ್ತೈದು ವರ್ಷದ ಪೊಲೀಸ್ ಅನುಭವದಲ್ಲಿ ವಿಚಿತ್ರ ಪ್ರಕರಣಗಳನ್ನು ಬಗೆಹರಿಸಿದ್ದ. ಈ ಪ್ರಕರಣ ನೋಡಲು ಸರಳವಾಗಿ ಕಂಡರೂ ಬಹಳಷ್ಟು ತಪ್ಪಿದ ಕೊಂಡಿಗಳಿದ್ದವು.

ಏನಾದರೂ ಆಗಲಿ ನೋಡಿಯೇ ಬಿಡೋಣ ಅಂತ ''ಲೇಡಿ ಪೊಲೀಸ್ ಬಂದರೆ ಈ ವಿಶಾಲಾಕ್ಷಮ್ಮನನ್ನೂ ಒದ್ದು ಕರೆದುಕೊಂಡು ಬನ್ನಿ. ಈ ವಯಸ್ಸಿನಲ್ಲಿ ಆಸೆ ನೋಡಿ. ಏಯ್ ನೀನೇ ಎಳ್ಕೊಂಡು ಬಾರಯ್ಯ ಇನ್ನ್ಯಾಕೆ ಆ ಲೇಡಿ ಪೊಲೀಸ್..."

"ಇನ್‌ಸ್ಪೆಕ್ಟರ್, ನೀವು ಆ ರೀತಿ ಮಾಡಲಾಗದು. ಅದು ಕಾನೂನಿಗೆ ವಿರುದ್ಧ!'' ಕೂಗಿದ ಆವರೆಗೆ ಸುಮ್ಮನಿದ್ದ ಲಾಯರ್.